# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 986 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 20-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಡೈರಿ ಉತ್ಪನ್ನಗಳನ್ನು ನಡೆಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರವು ರೈತರಿಗೆ ನೀಡುತ್ತಿರುವ ಸೌಲಭ್ಯಗಳಾವುವು;</td><td>ಕರ್ನಾಟಕ ಹಾಲು ಮಹಾಮಂಡಳಿ ಮತ್ತು 16 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ಪ್ರಸ್ತುತ 8,89,350 ಸಕ್ರಿಯ ಹಾಲು ಉತ್ಪಾದಕರಿಂದ ದಿನವಹಿ 99.00 ಲಕ್ಷ ಲೀಟರ್ ಹಾಲು ಸಂಗ್ರಹಣೆಯಾಗುತ್ತಿದ್ದು, ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಶೇ.10 ರಷ್ಟು ಹಾಲು ಶೇಖರಣೆ ಹೆಚ್ಚಾಗಿದ್ದು, ಸರ್ಕಾರವು ಗುಣಮಟ್ಟದ ಪ್ರತಿ ಲೀಟರ್ ಹಾಲಿಗೆ ರೂ.5/- ಪ್ರೋತ್ಸಾಹಧನ ನೀಡಲಾಗುತ್ತಿದೆ<br><br>ಕರ್ನಾಟಕ ಹಾಲು ಮಹಾಮಂಡಳಿ ಹಾಗೂ ಜಿಲ್ಲಾ ಹಾಲು ಒಕ್ಕೂಟಗಳು ಮತ್ತು ಸರ್ಕಾರದ ಪಶುಪಾಲನೆ ಮತ್ತು ಪಶುವೈದ್ಯ ಇಲಾಖೆಯ ವತಿಯಿಂದ ರಾಸುಗಳಿಗೆ ಲಸಿಕೆ ಕಾರ್ಯಕ್ರಮಕ್ಕಾಗಿ, ಕೃತಕ ಗರ್ಭಧಾರಣೆ, ರಾಸು ವಿಮೆ, ತರಬೇತಿ ಮತ್ತು ಹಾಲು ಉತ್ಪಾದಕರಿಗೆ ಮೇವಿನ ಅಭಿವೃದ್ಧಿಗಾಗಿ ಮೇವಿನ ಬೀಜಗಳನ್ನು ವಿತರಿಸುವ ಮೂಲಕ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಉತ್ತೇಜಿಸಲಾಗುತ್ತಿದೆ.</td></tr>
<tr><td>ಆ)</td><td>ಕಳೆದ ಐದು ವರ್ಷಗಳಲ್ಲಿ ಸೌಲಭ್ಯ ಪಡೆದ ರೈತರ ಸಂಖ್ಯೆ ಮತ್ತು ಅವರಿಗೆ ಬಿಡುಗಡೆ ಮಾಡಲಾದ ಸಹಾಯಧನವೆಷ್ಟು;</td><td>ಕಳೆದ ಐದು ವರ್ಷಗಳಲ್ಲಿ ಸರ್ಕಾರದಿಂದ ರೂ.5/- ಗಳ ಪ್ರೋತ್ಸಾಹಧನದ ಸೌಲಭ್ಯವನ್ನು ಪಡೆದಿರುವ ರೈತರ ಸಂಖ್ಯೆ ಹಾಗೂ ಬಿಡುಗಡೆಯಾದ ಸಹಾಯಧನದ ವಿವರ ಈ ಕೆಳಕಂಡಂತಿದೆ:-<br><br><table><tr><th>ವರ್ಷ</th><th>ಪ್ರೋತ್ಸಾಹಧನ ಪಡೆದ ಉತ್ಪಾದಕರ ಸಂಖ್ಯೆ</th><th>ಬಿಡುಗಡೆಯಾದ ಮೊತ್ತ (ರೂ.ಕೋಟಿಗಳಲ್ಲಿ)</th></tr><tr><td>2020-21</td><td>892130</td><td>1187.00</td></tr><tr><td>2021-22</td><td>904871</td><td>1403.00</td></tr><tr><td>2022-23</td><td>888551</td><td>1147.00</td></tr><tr><td>2023-24</td><td>871995</td><td>1168.76</td></tr><tr><td>2024-25</td><td>878633</td><td>1699.98</td></tr><tr><td></td><td>ಒಟ್ಟು</td><td>6605.74</td></tr></table></td></tr>
</table>

| | | |
|---|---|---|
| | | ರಾಜ್ಯದ ಹಾಲು ಉತ್ಪಾದಕರಿಗೆ ಜೂನ್-2025ರ ವರೆಗೆ ಪ್ರೋತ್ಸಾಹಧನವನ್ನು ಪಾವತಿಸಲಾಗಿರುತ್ತದೆ. |
| ಇ) | ಈ ಯೋಜನೆಯಡಿಯಲ್ಲಿ ಮಂಜೂರಾದ ಸಾಲಗಳ ಮೇಲಿನ ಬಡ್ಡಿಯನ್ನು ರೈತರಿಂದ ವಿಧಿಸಲಾಗುತ್ತಿದೆಯೇ; (ವಿವರ ನೀಡುವುದು) | ಅನ್ವಯಿಸುವುದಿಲ್ಲ |
| ಈ) | ಹೆಚ್ಚಿನ ಪ್ರಮಾಣದಲ್ಲಿ ಹಾಲು ಉತ್ಪಾದಿಸುವ ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಿದೆಯೇ? | ಕರ್ನಾಟಕ ಹಾಲು ಮಹಾಮಂಡಳದ 16 ಜಿಲ್ಲಾ ಹಾಲು ಒಕ್ಕೂಟಗಳಿಂದ ಹಾಲು ಶೇಖರಣೆಗನುಗುಣವಾಗಿ ಅಗತ್ಯತೆಗೆ ತಕ್ಕಂತೆ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ, ಸಂಸ್ಕರಿಸಲಾಗಿರುತ್ತದೆ. |

**ಸಂಖ್ಯೆ: ಪಸಂಮೀ 62 ಕಹಾಮ 2025**

**(ಕೆ.ವೆಂಕಟೇಶ್)**
ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು.